# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 990 |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ |
| ಉತ್ತರಿಸಬೇಕಾದ ದಿನಾಂಕ | : | 24/02/2023 |
| ಉತ್ತರಿಸಬೇಕಾದವರು | : | ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ | ವಿಷಯ | ಉತ್ತರ |
|---|---|---|
| ಅ) | ರಾಜ್ಯದ ವಸತಿ ಶಾಲೆಗಳಲ್ಲಿ ಅಲೆಮಾರಿ ಜನಾಂಗದ ಮಕ್ಕಳಿಗೆ ಪ್ರವೇಶಕ್ಕೆ ಮೀಸಲಾತಿ ಕಲ್ಪಿಸಲಾಗಿದೆಯೇ; ಹಾಗಿದ್ದಲ್ಲಿ ಸರ್ಕಾರದ ಆದೇಶಗಳನ್ನು ಒದಗಿಸುವುದು. | ರಾಜ್ಯದ ವಸತಿ ಶಾಲೆಗಳಲ್ಲಿ ಅಲೆಮಾರಿ ಜನಾಂಗದ ಮಕ್ಕಳ ಪ್ರವೇಶಕ್ಕೆ ಶೇ 10 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ದಿನಾಂಕ:19.06.2021 ರ ಆದೇಶ ಪ್ರತಿ ನೀಡಲಾಗಿದೆ. |
| ಆ) | ರಾಜ್ಯದ ವಸತಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಅಲೆಮಾರಿ ಜನಾಂಗದವರು ಎಷ್ಟು ಸಂಖ್ಯೆಯಲ್ಲಿದ್ದಾರೆ; (ವಿವರ ನೀಡುವುದು) | ರಾಜ್ಯದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ 2762 ಪರಿಶಿಷ್ಟ ಜಾತಿ, 358 ಪರಿಶಿಷ್ಟ ಪಂಗಡ ಮತ್ತು 2517 ಹಿಂದುಳಿದ ವರ್ಗದ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳು ಒಟ್ಟಾರೆ 5637 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ರಾಜ್ಯದ ವಸತಿ ಶಾಲೆಗಳಲ್ಲಿ ಉತ್ತರ ಕರ್ನಾಟಕದ ಅಲೆಮಾರಿ ಜನಾಂಗದ ಮಕ್ಕಳು ಪ್ರವೇಶ ಪಡೆಯಲು ಜಾಗೃತಿ ಪ್ರೇರಣೆ, ಪ್ರೋತ್ಸಾಹ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು) | ಅಲೆಮಾರಿ ವರ್ಗದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಹಿಂದುಳಿದ ವರ್ಗಗಳ 3 ಅಲೆಮಾರಿ ವಸತಿ ಶಾಲೆಗಳನ್ನು ಪ್ರಾರಂಭಿಸಿದ್ದು, ಸದರಿ ವಸತಿ ಶಾಲೆಗಳಲ್ಲಿ ಶೇ.100 ರಷ್ಟು ಸೀಟುಗಳನ್ನು ಹಿಂದುಳಿದ ವರ್ಗದ ಅಲೆಮಾರಿ ವಿದ್ಯಾರ್ಥಿಗಳಿಗೆ ಮೀಸಲಿಡಲಾಗಿದೆ.<br>ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಕ್ಕೆ ಸೇರಿದ ಮಕ್ಕಳಿಗೆ ಸಂಘದ ಎಲ್ಲಾ ವಸತಿ ಶಾಲೆಗಳಲ್ಲಿ ಶೇ.10 ಸ್ಥಾನಗಳನ್ನು ಮೀಸಲಿಡಲಾಗಿದ್ದು, ಸದರಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸುವಂತೆ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗಳಿಗೆ ಕೋರಲಾಗಿದೆ.<br>ಅಲ್ಲದೇ ಅಲೆಮಾರಿ ಜನಾಂಗದವರಿಗೆ ಜಾಗೃತಿ ಮೂಡಿಸಲು ಕರಪತ್ರ ಮತ್ತು ಭಿತ್ತಿಪತ್ರಗಳನ್ನು ಹೊರಡಿಸಿದ್ದು, ಎಲ್ಲಾ ವಸತಿ ಶಾಲಾ ಪ್ರಾಂಶುಪಾಲರಿಗೆ ರವಾನಿಸಿದ್ದು ವ್ಯಾಪಕ ಪ್ರಚಾರ ನೀಡಲಾಗುತ್ತಿದೆ. |

| | | |
|---|---|---|
| ಈ) | ಅಲೆಮಾರಿ ಜನಾಂಗದ ಮಕ್ಕಳಿಗಾಗಿ ಸ್ಥಾಪಿಸಿದ ಜಿಲ್ಲಾವಾರು ಆಶ್ರಮ ಶಾಲೆಗಳೆಷ್ಟು; ಮತ್ತು ಪ್ರವೇಶ ಪಡೆದ ಮಕ್ಕಳ ಸಂಖ್ಯೆ ಎಷ್ಟು? | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಅಲೆಮಾರಿ ಜನಾಂಗದ ಮಕ್ಕಳಿಗಾಗಿ ಪ್ರತ್ಯೇಕವಾಗಿ ಯಾವುದೆ ಆಶ್ರಮ ಶಾಲೆಗಳು ಮಂಜೂರಾಗಿರುವುದಿಲ್ಲ.<br>ಮುಂದುವರೆದು,ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ವರ್ಗದ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಅಲೆಮಾರಿ, ಅರೆ-ಅಲೆಮಾರಿ, ಸೂಕ್ಷ್ಮ, ಅತಿ-ಸೂಕ್ಷ್ಮ ಸಮುದಾಯಕ್ಕೆ ಸೇರಿದ ಮಕ್ಕಳಿಗೆ ಶೇ.10 ರಷ್ಟು ಸ್ಥಾನಗಳನ್ನು ಮೀಸಲಿಡಲಾಗಿದೆ. |

ಸಕಇ 25 ಎಂಡಿಎಸ್ 2023

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಅನುಬಂಧ

ಜಿಲ್ಲಾವಾರು ಅಲೆಮಾರಿ/ ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ದಾಖಲಾತಿ ವಿವರ

| ಕ್ರ.ಸಂ | ಜಿಲ್ಲೆ | ಪ.ಜಾತಿ | ಪ.ವರ್ಗ | ಹಿಂ.ವರ್ಗ | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 735 | 65 | 125 | 925 |
| 2 | ಬಳ್ಳಾರಿ | 3 | 0 | 4 | 7 |
| 3 | ಬೆಳಗಾವಿ | 541 | 10 | 58 | 609 |
| 4 | ಬೆಂಗಳೂರು ನಗರ | 1 | 0 | 4 | 5 |
| 5 | ಬೀದರ್ | 3 | 0 | 89 | 92 |
| 6 | ಚಾಮರಾಜನಗರ | 0 | 0 | 53 | 53 |
| 7 | ಚಿಕ್ಕಬಳ್ಳಾಪುರ | 9 | 25 | 92 | 126 |
| 8 | ಚಿಕ್ಕಮಗಳೂರು | 196 | 44 | 119 | 359 |
| 9 | ಚಿತ್ರದುರ್ಗ | 0 | 0 | 375 | 375 |
| 10 | ದಾವಣಗೆರೆ | 11 | 30 | 18 | 59 |
| 11 | ಧಾರವಾಡ | 35 | 4 | 9 | 48 |
| 12 | ಗದಗ | 86 | 0 | 0 | 86 |
| 13 | ಹಾಸನ | 12 | 0 | 142 | 154 |
| 14 | ಹಾವೇರಿ | 0 | 0 | 71 | 71 |
| 15 | ಕಲಬುರಗಿ | 10 | 0 | 7 | 17 |
| 16 | ಕೋಲಾರ | 19 | 23 | 20 | 62 |
| 17 | ಕೊಪ್ಪಳ | 221 | 0 | 19 | 240 |
| 18 | ಮಂಡ್ಯ | 1 | 0 | 0 | 1 |
| 19 | ರಾಯಚೂರು | 22 | 1 | 0 | 23 |
| 20 | ಶಿವಮೊಗ್ಗ | 242 | 84 | 127 | 453 |
| 21 | ತುಮಕೂರು | 0 | 0 | 892 | 892 |
| 22 | ಉಡುಪಿ | 1 | 0 | 2 | 3 |
| 23 | ವಿಜಯನಗರ | 83 | 0 | 2 | 85 |
| 24 | ವಿಜಯಪುರ | 494 | 72 | 278 | 844 |
| 25 | ಯಾದಗಿರಿ | 37 | 0 | 11 | 48 |
|  | ಒಟ್ಟು | **2762** | **358** | **2517** | **5637** |